

ಮೊದಲ ಸಲ ನಾನು ವಳಗೆರೆಗೆ ಹೋದದ್ದು ನನ್ನ ಚಿಕ್ಕಮ್ಮನ ಜೊತೆ.

'ಇಲ್ಲಿಯೇ ಕೂತ್ಕೋ. ನಾನು ರಾಯರ ಜೊತೆ ಮಾತನ್ನಾಡಿಕೊಂಡ್ ಬರ್ತೇನೆ' ಎಂದ ಚಿಕ್ಕಮ್ಮ ನನ್ನನ್ನು ಹೊರಜಗುಲಿಯಲ್ಲಿ ಕೂರಿಸಿ ಪಕ್ಕದಲ್ಲಿಯ ಕೋಣೆಯೊಂದರೊಳಗೆ ಹೋಗಿದ್ದಳು.

ಗೋಡೆಯ ಪಕ್ಕದಲ್ಲಿ ಸಾಲಾಗಿ ಇರಿಸಿದ್ದ ಕುರ್ಚಿಗಳಲ್ಲಿ ಒಂದರ ಮೇಲೆ ನಾನು ಕುಳಿತೆ. ಗೋಡೆಗಳತ್ತ ನೋಡಿದೆ. ಪೇಟ, ರುಮಾಲು ಸುತ್ತಿದ್ದ, ಪೊಗರು ಮೀಸೆಯ ನಾಲ್ಕಾರು ಮಂದಿಯ ಫೋಟೊಗಳು ಸಾಲುಸಾಲಾಗಿ. ಕೆಲವಕ್ಕೆ ಗಂಧದ ಹಾರ. ಮತ್ತೆ ಕೆಲವು ಖಾಲಿ ಖಾಲಿ. ಗೋಡೆಯ ಮತ್ತೊಂದೆಡೆ ಉದ್ದುದ್ದ ಕೊಂಬಿನ ಜಿಂಕೆಯ ಮುಖವಾಡಗಳು. ನಾನು ಕುಳಿತಿದ್ದ ಕುರ್ಚಿಯ ಕೊನೆಯ ಮೂಲೆಯಲ್ಲಿ ಎರಡು ಗೋಡೆಗಳು ಸೇರುವ ಮೂಲೆಯಲ್ಲಿ ಎತ್ತರದ ಒಂದು ಕಾಲ್ಮಣೆ. ಅದರ ಮೇಲೆ ಹಳೆಯ ಮರ್ಫಿ ರೇಡಿಯೋ. ಅದರ ಪಕ್ಕದಲ್ಲಿ ಹೂದಾನಿ.

ಎಣಿಸಿದೆ: ನಾನು ಕುಳಿತ ಕುರ್ಚಿಯನ್ನೂ ಸೇರಿ ಎಣಿಸಿದೆ: ಒಟ್ಟು ಆರು ಕುರ್ಚಿಗಳು. ಆ ಕುರ್ಚಿಗಳ ಮುಂದೆ ಒಂದು ಕಿರು ಕಾಲ್ಮಣೆ. ಅದರ ಮೇಲೆ ಹಳೆಯ ಚಂದಮಾಮ, ಬಾಲಮಿತ್ರ ಮುಂತಾದ ಒಂದಿಷ್ಟು ಪುಸ್ತಕಗಳು. ಆಚೆ ಬದಿ ಗೋಡೆಗೆ ತಾಗಿ ಉದ್ದನೆಯ ಒಂದು ಬೆಂಚು. ಪ್ರಧಾನ ಬಾಗಿಲಿಗೆ ತಾಗಿದಂತೆ ಬಲಬದಿ ಬೆತ್ತದ ಆರಾಮ ಕುರ್ಚಿ. ಅದರ ಮೇಲೆ ಮೆತ್ತನೆಯ ಹಾಸು.

ಕುಳಿತಲ್ಲಿಂದ ಎದ್ದೆ. 'ಒಮ್ಮೆ ಆ ಬೆತ್ತದ ಕುರ್ಚಿಯಲ್ಲಿ ಕುಳಿತೆದ್ದು ನೋಡೋಣ; ಹೇಗೂ ರಾಯರೇನೂ ಇಲ್ಲಿ ಇಲ್ಲವಲ್ಲಾ' ಎನ್ನಿಸಿತು.

ಕುರ್ಚಿಯ ಬಳಿ ಹೋದೆ. ಕೈಯಿಂದ ಮೆಲ್ಲನೆ ಆ ಆರಾಮು ಕುರ್ಚಿಯನ್ನು ಮುಟ್ಟಿದೆ;